ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಪಟ್ಟಿ–೪

ಒಟ್ಟು ಪ್ರಶ್ನೆಗಳು – ೧೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ನಾಲ್ಕನೇ ಅಧಿವೇಶನ

### ಗುರುವಾರ, ದಿನಾಂಕ: ೧೨ನೇ ಡಿಸೆಂಬರ್, ೨೦೨೪

**ಸಮೂಹ – IV**

೧. ಮುಖ್ಯಮಂತ್ರಿಗಳು
೨. ಉಪ ಮುಖ್ಯಮಂತ್ರಿಗಳು
೩. ಗೃಹ ಸಚಿವರು
೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು
೫. ಅಬಕಾರಿ ಸಚಿವರು
೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

## ರಾಜ್ಯ ಸರ್ಕಾರವು ಭಾರತದ ರಿಸರ್ವ್ ಬ್ಯಾಂಕ್ ಮತ್ತು ಇತರೆ ಮೂಲಗಳಿಂದ ಪಡೆದಿರುವ ಸಾಲಗಳ ಬಗ್ಗೆ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –

೪೬ (೪೬೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ೨೦೧೯–೨೦, ೨೦೨೦–೨೧, ೨೦೨೧–೨೨, ೨೦೨೨–೨೩ ಮತ್ತು ೨೦೨೩–೨೪ ಆರ್ಥಿಕ ವರ್ಷಗಳಲ್ಲಿ ಭಾರತದ ರಿಸರ್ವ್ ಬ್ಯಾಂಕ್ ಮತ್ತು ಇತರೆ ಮೂಲಗಳಿಂದ ಪಡೆದಿರುವ ಸಾಲವೆಷ್ಟು; ಮತ್ತು ಈ ರೀತಿ ಪಡೆದ ಸಾಲ ಜಿಡಿಪಿಯ ಶೇಕಡಾ ಎಷ್ಟರಷ್ಟು ಇದೆ ;

ಹಾಗೂ ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಸಾಲಮಿತಿಗೆ ಒಳಪಟ್ಟಿದೆಯೇ ; (ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರ ಈ ರೀತಿ ಸಾಲವನ್ನು ಪಡೆಯಲು ಯಾವ ರೀತಿ ಆಧಾರಗಳನ್ನು ನೀಡುತ್ತಿದೆ ; ಮತ್ತು ಈ ಬಗ್ಗೆ ನಿಯತಕಾಲಿಕವಾಗಿ ಕೇಂದ್ರ ಸರ್ಕಾರದಿಂದ ಆಧಾರ, ಅನುಮತಿ ಮತ್ತು ಸಹಮತಿ ಪಡೆಯಲಾಗಿದೆಯೇ ; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರ ಮೇಲ್ಕಂಡ ವರ್ಷಗಳಲ್ಲಿ ಪಡೆದ ಸಾಲವನ್ನು ಯಾವ ಯಾವ ಬಾಬ್ತುಗಳಿಗೆ ಬಳಸಿಕೊಳ್ಳಲಾಗಿದೆ ಹಾಗೂ ಈ ಸಾಲದಲ್ಲಿ ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ವಲಯಗಳಲ್ಲಿ ವೆಚ್ಚ ಮಾಡಿದ ಮೊತ್ತವೆಷ್ಟು ; (ವರ್ಷವಾರು, ವಲಯವಾರು ಮತ್ತು ಐಟಂವಾರು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದ ಜಿಡಿಪಿ ಶೇ. ೩ ಕ್ಕಿಂತ ಹೆಚ್ಚುಪಟ್ಟು ಸಾಲದ ಹೊರೆ ಇದ್ದಲ್ಲಿ ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿ ತೆರಿಗೆ ಭರಿಸಲು ರಾಜ್ಯ ಸರ್ಕಾರದ ಕ್ರಮಗಳು ಯಾವುವು ; ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು ;

(ಉ) ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಐದು ಗ್ಯಾರಂಟಿಗಳಿಗೆ ಆಯವ್ಯಯದ ಬಹುಪಾಲು ವಿನಿಯೋಗ ಆಗುತ್ತಿರುವುದರಿಂದ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಿಂದ ಸಾಲದ ಮಿತಿ ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸಿದೆಯೇ ; ಅಥವಾ ಬಡ್ಜೆಟೇತರ ಮೂಲಗಳಿಂದ ಸಾಲ ಎತ್ತಲು ಪ್ರಯತ್ನಿಸಿದೆಯೇ ? (ಪೂರ್ಣ ಮಾಹಿತಿ ನೀಡುವುದು)

## ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೊಂಡಿರುವ ಏತ ನೀರಾವರಿ ಯೋಜನೆ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೪೭ (೪೪೯) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೊಂಡಿರುವ ಏತ ನೀರಾವರಿ (ಹನಿ ನೀರಾವರಿ ಮಾತ್ರ) ಯೋಜನೆಗಳಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಯೋಜನೆಯಲ್ಲಿ ಹನಿ ನೀರಾವರಿಯನ್ನು ಅಳವಡಿಸಿಕೊಂಡು ಸದ್ಬಳಕೆ ಮಾಡುವ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಯಾರು ನಿರ್ವಹಿಸುತ್ತಾರೆ ; (ಮಾಹಿತಿ ನೀಡುವುದು)

(ಇ) ರೈತರಿಗೆ ಹನಿ ನೀರಾವರಿ ಅಳವಡಿಸಿಕೊಳ್ಳಲು ನೀಡಿದ ಪರಿಕರಗಳು ಮತ್ತು ಭೂಮಿಯಲ್ಲಿ ಅಳವಡಿಸಿದ ಪೈಪುಗಳಲ್ಲಿ ಏನಾದರೂ ಸಮಸ್ಯೆ ಬಂದರೆ ಇದನ್ನು ಯಾರು ನಿಭಾಯಿಸುತ್ತಾರೆ ; ಈ ಏತ ನೀರಾವರಿ ಯೋಜನೆಗಳು ಪೂರ್ಣಗೊಂಡ ಮೇಲೆ ಅದರ ಮೇಲ್ವಿಚಾರಣೆ ಮಾಡುವ ಕೆಲಸ ಯಾರದ್ದು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಹನಿ ನೀರಾವರಿ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೈತರಲ್ಲಿ ಯಾವ ತರವಾದ ಜಾಗೃತಿ ಮಾಡಲಾಗುತ್ತಿದೆ ;

(ಉ) ಕೆಲವೊಂದು ಏತ ನೀರಾವರಿ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿ ಮಾಡಿರುವುದು, ಕಾಮಗಾರಿ ಮಾಡಿದ ನಂತರ ರೈತರಿಗೆ ನೀಡಿದ ಪೈಪುಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು, ಬೇಗ ಹಾಳಾಗಿರುವುದು, ರೈತರು ತಮ್ಮ ಜಮೀನಿನಿಂದ ಪೈಪುಗಳನ್ನು ಕಿತ್ತು ಹಾಕಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಊ) ಪೂರ್ಣಗೊಂಡ ಏತ ನೀರಾವರಿ ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡಲು ಸರ್ಕಾರದ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಿ, ವರದಿಯನ್ನು ಪಡೆಯಲು ಸರ್ಕಾರ ಚಿಂತನೆ ನಡೆಸಿದೆಯೇ ? (ಮಾಹಿತಿ ಒದಗಿಸುವುದು)

## “ಡಿಜಿಟಲ್ ಅರೆಸ್ಟ್” ಎಂಬ ಹೊಸ ಮಾದರಿಯ ವಂಚನೆಯ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೪೮ (೪೦೩) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಂಚನೆಯ ಸಲುವಾಗಿ ದಿನಕ್ಕೊಂದು ಹೊಸ ಅಸ್ತ್ರ ಪ್ರಯೋಗಿಸುತ್ತಿರುವ ಸೈಬರ್ ವಂಚಕರು “ಡಿಜಿಟಲ್ ಅರೆಸ್ಟ್” ಎಂಬ ಹೊಸ ಮಾದರಿಯ ವಂಚನೆಯ ಮೂಲಕ ಹಲವರನ್ನು ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪ್ರಸುತ್ತ ವರ್ಷದಲ್ಲಿ ಈ ಸಂಬಂಧಿತ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ ;

(ಇ) ಸದರಿ ದಾಖಲಾದ ಪ್ರಕರಣಗಳಲ್ಲಿ ವಂಚಕರಿಂದ ಸಾರ್ವಜನಿಕರು ಕಳೆದುಕೊಂಡಿರುವ ಹಣದ ಮೊತ್ತವೆಷ್ಟು ; (ವಿವರ ನೀಡುವುದು)

(ಈ) ಸದರಿ ಪ್ರಕರಣಗಳಲ್ಲಿ ವಂಚಕರ ಮೂಲವನ್ನು ಪತ್ತೆ ಮಾಡಿ, ಅವರಿಂದ ವಂಚನೆಯ ಹಣವನ್ನು ವಶಪಡಿಸಿಕೊಳ್ಳಲಾಗಿದೆಯೇ ;

(ಉ) “ಡಿಜಿಟಲ್ ಅರೆಸ್ಟ್” ವಂಚನೆಯ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ಹಲವಾರು ಅಮಾಯಕರು ಈ ವಂಚನೆಯ ಜಾಲಕ್ಕೆ ಸಿಲುಕಿ, ಸಂಕಷ್ಟಕ್ಕೀಡಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಯು.ಕೆ.ಪಿ. ಅಡಿಯಲ್ಲಿ ಬರುವ ಭೂಸ್ವಾಧೀನ ಪ್ರಸ್ತಾವನೆ ರದ್ದುಪಡಿಸಿದ ಜಮೀನುಗಳ ಮಾಲೀಕರಿಗೆ ನಷ್ಟ ಪರಿಹಾರ ನೀಡುವ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೯ (೪೩೬) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು ಯು.ಕೆ.ಪಿ. ಹಂತ ೩ಕ್ಕೆ ಸಂಬಂಧಿಸಿದಂತೆ ಎಫ್.ಆರ್.ಎಲ್. ೫೧೯.೬ ರಿಂದ ೫೨೪.೨೫೬ ಮೀಟರ್‌ಗಳವರೆಗೆ ಮುಳುಗಡೆ ಹೊಂದುವ ೭೫.೫೬೩ ಎಕರೆ ಕ್ಷೇತ್ರದ ಜಮೀನುಗಳನ್ನು ೨ ಹಂತಗಳಲ್ಲಿ ಭೂಸ್ವಾಧೀನಕ್ಕೆ ಒಳಪಡಿಸಲು ತೀರ್ಮಾನಿಸಿ, ಮೊದಲನೆಯದಾಗಿ ಎಫ್.ಆರ್.ಎಲ್. ೫೧೯.೬ ರಿಂದ ೫೨೨ರವರೆಗೆ ಮಾತ್ರ ಮುಳುಗಡೆಯಾಗುವ ೩೮.೯೮೩ ಎಕರೆ ಭೂಸ್ವಾಧೀನ ಮತ್ತು ಬಾಕಿ ಉಳಿದ ೩೬.೫೮೦ ಎಕರೆ ಜಮೀನನ್ನು ಮುಂದಿನ ಹಂತದಲ್ಲಿ ಭೂಸ್ವಾಧೀನಕ್ಕೆ ಒಳಪಡಿಸುವ ತೀರ್ಮಾನ ಮಾಡಿರುವುದು ನಿಜವೇ ;

(ಆ) ಈ ಹಿನ್ನೆಲೆಯಲ್ಲಿ ಭೂಸ್ವಾಧೀನ ಕಾಯ್ದೆ ಕಲಂ ೧೧(೧) ಅಧಿಸೂಚನೆ ನಂತರದ ೧೯(೧) ಅಧಿಸೂಚನೆಗಳನ್ನು ಕೂಡ ಅನೇಕ ಜಮೀನುಗಳ ಮಾಲೀಕರಿಗೆ ನೀಡಲಾಗಿದೆಯೇ ;

(ಇ) ಭೂಸ್ವಾಧೀನ ಕಲಂ ೧೧(೧)ರ ಪ್ರಕಟಣೆಯ ನಂತರ ಜಮೀನು ಮಾಲೀಕರು ಅದಕ್ಕೆ ಒಳಪಟ್ಟ ಕ್ಷೇತ್ರದಲ್ಲಿ ಯಾವುದೇ ಸುಧಾರಣೆ, ಅಭಿವೃದ್ಧಿ ಚಟುವಟಿಕೆ ಮಾಡಕೂಡದೆಂಬ ಕಟ್ಟಳೆಗಳನ್ನು ನೋಟೀಸಿನ ಒಂದು ಭಾಗವಾಗಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಈ) ಈ ಭೂಸ್ವಾಧೀನ ಪ್ರಕ್ರಿಯೆ ಕಲಂ ೧೧(೧), ೧೯(೧) ಜಾರಿಯಾದ ಪ್ರಕರಣಗಳ ಪ್ರಕ್ರಿಯೆ ಅರ್ಧಕ್ಕೆ ನಿಲ್ಲಿಸಿ, ಅನೇಕ ಪ್ರಸ್ತಾವನೆಗಳನ್ನು ರದ್ದುಪಡಿಸಿದ್ದು, ಇದರಿಂದ ಜಮೀನು ಅಭಿವೃದ್ಧಿಪಡಿಸಿ ಹೆಚ್ಚಿನ ಆದಾಯ ಪಡೆಯಬೇಕೆಂದುಕೊಂಡಿದ್ದ ರೈತರಿಗೆ ತುಂಬಲಾರದ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಭೂಸ್ವಾಧೀನ ಪ್ರಸ್ತಾವನೆ ರದ್ದುಪಡಿಸಿದ ಜಮೀನುಗಳ ಮಾಲೀಕರಿಗೆ ನಷ್ಟ ಪರಿಹಾರ ನೀಡಲಾಗುವುದೇ ?

## ಕಾವೇರಿ ನದಿಯು ಕಲುಷಿತವಾಗುತ್ತಿರುವ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೦ (೪೭೬) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಕಾವೇರಿ ಉಗಮ ಸ್ಥಾನವಿದ್ದು, ಸದರಿ ನದಿಯು ಕಲುಷಿತವಾಗುತ್ತಿರುವುದರ ಬಗ್ಗೆ ಈ ಹಿಂದೆ ವರದಿಯಾಗಿತ್ತು. ಈ ವರದಿಯ ಅನ್ವಯ ಸರ್ಕಾರ ಕಾವೇರಿ ನದಿಯ ರಕ್ಷಣೆಗಾಗಿ ಅಧ್ಯಯನ ಸಮಿತಿಯನ್ನು ರಚನೆ ಮಾಡಲಾಗಿದೆಯೇ ;

(ಆ) ಮಾಡಿದ್ದರೆ, ಅಧ್ಯಯನ ಸಮಿತಿಯಲ್ಲಿ ಯಾವ ಯಾವ ಸದಸ್ಯರಿದ್ದಾರೆ ; ಸದರಿ ಸಮಿತಿಯು ಎಷ್ಟು ಬಾರಿ ವೀಕ್ಷಣೆ ನಡೆಸಿ ಅಧ್ಯಯನ ನಡೆಸಿದೆ ; ಯಾರ ಅಧ್ಯಕ್ಷತೆಯಲ್ಲಿ ಸಮಿತಿಯು ರಚನೆಯಾಗಿದೆ ;

(ಇ) ಸಮಿತಿಯು ಸರ್ಕಾರಕ್ಕೆ ವರದಿಯನ್ನು ನೀಡಿದೆಯೇ, ನೀಡಿದ್ದಲ್ಲಿ ವರದಿಯ ಪ್ರತಿಯನ್ನು ಒದಗಿಸುವುದು ; ಈ ವರದಿ ಅನ್ವಯ ಕಾವೇರಿ ನದಿಯ ರಕ್ಷಣೆಗಾಗಿ ಸರ್ಕಾರ ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳೇನು ? (ಸಂಪೂರ್ಣ ವಿವರಣೆ ನೀಡಿ)

## ರಾಜ್ಯದಲ್ಲಿರುವ ಅಣೆಕಟ್ಟುಗಳ ಸುರಕ್ಷತೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೫೧ (೫೫೧) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಪ್ರಮುಖ ಮತ್ತು ಮಧ್ಯಮ ಗಾತ್ರದ ಅಣೆಕಟ್ಟು ಹಾಗೂ ಜಲಾಶಯಗಳು ಯಾವುವು ; ಇವುಗಳ ನಿರ್ಮಾಣ ವರ್ಷ, ನೀರಿನ ಸಂಗ್ರಹ ಸಾಮರ್ಥ್ಯ ಎಷ್ಟು ; ಈ ಅಣೆಕಟ್ಟು /ಜಲಾಶಯಗಳ ಆಯಸ್ಸು ಎಷ್ಟು ; (ಅಣೆಕಟ್ಟು ಹಾಗೂ ಜಲಾಶಯವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ 'ಅಣೆಕಟ್ಟು ಸುರಕ್ಷತಾ ಸಮಿತಿ' ರಚಿಸಲಾಗಿದೆಯೇ ; ಸಮಿತಿಯಲ್ಲಿ ಯಾರ್ಯಾರು ಇದ್ದಾರೆ ; ಸಮಿತಿಯ ಉದ್ದೇಶ ಮತ್ತು ಕಾರ್ಯವ್ಯಾಪ್ತಿ ಏನು ; (ಈ ಕುರಿತು ಮಾಹಿತಿ ನೀಡುವುದು)

(ಇ) ಈ ಸಮಿತಿಯು ಈವರೆವಿಗೂ ರಾಜ್ಯದ ಎಷ್ಟು ಅಣೆಕಟ್ಟುಗಳಿಗೆ ಭೇಟಿ ನೀಡಿದೆ ಹಾಗೂ ಸುರಕ್ಷತೆಯ ಬಗ್ಗೆ ವರದಿ ನೀಡಿದೆಯೇ ; ವರದಿ ಆಧರಿಸಿ ಯಾವುದಾದರೂ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಈ) ಜಲಾಶಯ ಸುರಕ್ಷತಾ ಕಾಯ್ದೆ–೨೦೨೧ರ ಪ್ರಕಾರ ಸಮಿತಿಯು ವಾರ್ಷಿಕ ಎಷ್ಟು ಬಾರಿ ಸಭೆಗಳನ್ನು ನಡೆಸಬೇಕು ; ಈವರೆವಿಗೂ ಎಷ್ಟು ಸಭೆಗಳನ್ನು ನಡೆಸಲಾಗಿದೆ ;

(ಉ) ಸಮಿತಿಯು ನೀಡುವ ವರದಿಯನ್ನು ಸಾರ್ವಜನಿಕಗೊಳಿಸಬೇಕಿರುವುದು ನಿಜವೇ ; ಹಾಗಿದ್ದಲ್ಲಿ, ಈವರೆವಿಗೂ ಎಷ್ಟು ವರದಿಯನ್ನು ಸಾರ್ವಜನಿಕಗೊಳಿಸಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಿಸುತ್ತಿರುವ ಬಗ್ಗೆ

ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –

೫೨ (೪೦೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಎಷ್ಟು ತೆರಿಗೆ ಸಂಗ್ರಹವಾಗಿದೆ ; ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನ ಅಂತ್ಯದವರೆಗೆ ಗುರಿ ಹೊಂದಲಾಗಿದ್ದ ಮತ್ತು ಸಂಗ್ರಹವಾಗಿರುವ ತೆರಿಗೆ ಎಷ್ಟು ;

(ಆ) ಗ್ಯಾರಂಟಿ ಯೋಜನೆಗಳಿಗಾಗಿ ಪ್ರತೀ ತಿಂಗಳು ಅಗತ್ಯವಿರುವ ಹಣ ಎಷ್ಟು ; ಗ್ಯಾರಂಟಿ ಯೋಜನೆಗಳು ಅಸ್ತಿತ್ವಕ್ಕೆ ಬಂದಾಗಿನಿಂದ ಸದರಿ ಯೋಜನೆಗಳಿಗೆ (೨೦೨೪, ನವೆಂಬರ್ ಅಂತ್ಯದವರೆಗೆ) ವೆಚ್ಚವಾಗಿರುವ ಹಣ ಎಷ್ಟು ; (ಗ್ಯಾರಂಟಿ ಯೋಜನೆವಾರು ಸಮಗ್ರ ಮಾಹಿತಿ ಒದಗಿಸುವುದು)

(ಇ) ಗ್ಯಾರಂಟಿ ಅನುಷ್ಠಾನ ಸಮಿತಿಗಳನ್ನು ರಚನೆ ಮಾಡಲಾಗಿದೆಯೇ ; (ಜಿಲ್ಲಾವಾರು ವಿವರ ನೀಡುವುದು) ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ/ಸದಸ್ಯರಿಗೆ ನೀಡುತ್ತಿರುವ ವೇತನ/ಗೌರವ ಧನ ಹಾಗೂ ಇನ್ನಿತರ ಸೌಲಭ್ಯಗಳೇನು ; (ಆದೇಶದ ಪ್ರತಿ ಒದಗಿಸವುದು)

(ಈ) ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಿಸಲು ಸರ್ಕಾರ ನಿರ್ಧರಿಸಿದೆಯೇ ; ಪರಿಷ್ಕರಣೆಗೆ ಕಾರಣಗಳೇನು ; ಈ ಕುರಿತು ಸಚಿವ ಸಂಪುಟ ಸಭೆಯಲ್ಲಿ ಆಗಿರುವ ಚರ್ಚೆಯ ವಿವರಗಳೇನು ; ಗ್ಯಾರಂಟಿ ಪರಿಷ್ಕರಣೆಗೆ ಅನುಸರಿಸುವ ಮಾನದಂಡಗಳೇನು ;

(ಉ) ಸರ್ಕಾರವು ವಿವಿಧ ಮೂಲಗಳಿಂದ ಪಡೆದಿರುವ ಸಾಲಕ್ಕೆ ಪ್ರತೀ ತಿಂಗಳು ಪಾವತಿಸುತ್ತಿರುವ ಅಸಲು ಹಾಗೂ ಬಡ್ಡಿ ಎಷ್ಟು ; ಕಳೆದ ೨ ವರ್ಷಗಳಿಂದ ರಾಜ್ಯ ಸರ್ಕಾರ ಯಾವ ಸಂಸ್ಥೆಯಿಂದ ಎಷ್ಟು ಬಾಹ್ಯ ಮತ್ತು ಆಂತರಿಕ ಸಾಲ ಪಡೆದಿದೆ ; (ಸಮಗ್ರ ವಿವರ ನೀಡುವುದು)

(ಊ) ಗ್ಯಾರಂಟಿ ಅನುಷ್ಠಾನದಿಂದಾಗಿ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನದ ಕೊರತೆಯಾಗುತ್ತಿರುವುದು ನಿಜವೇ ; ಕಳೆದ ೨ ವರ್ಷಗಳಿಂದ (೨೦೨೪ರ ನವೆಂಬರ್ ಅಂತ್ಯದವರೆಗೆ) ಕ್ಷೇತ್ರಗಳ ಅಭಿವೃದ್ಧಿಗೆ ನೀಡಿರುವ ಅನುದಾನ ಎಷ್ಟು ? (ಇಲಾಖಾವಾರು ವಿವರವನ್ನು ಕ್ಷೇತ್ರವಾರು ಒದಗಿಸುವುದು)

## ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ವಿಶೇಷ ತಂಡ ರಚನೆ ಮಾಡುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೩ (೪೩೮) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಗಾಂಜಾ, ಅಕ್ರಮ ಮಾರಾಟ, ಮಟಕಾ ದಂಧೆ, ಜೂಜಾಟ, ನಕಲಿ ಗುಟ್ಕಾ, ಅಕ್ರಮ ಚಟುವಟಿಕೆಗಳು ಜಿಲ್ಲೆಯ ವ್ಯಾಪ್ತಿಯಲ್ಲಿ ಭಯವಿಲ್ಲದೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾದವರ ವಿರುದ್ಧ ಕೈಗೊಂಡ ಕ್ರಮವೇನು ; ಇಲ್ಲಿಯವರೆಗೆ ಎಷ್ಟು ಕೇಸ್ ದಾಖಲಾಗಿವೆ ; (ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ಮೌಲ್ಯದ ಗುಟ್ಕಾ, ಅಕ್ರಮ ಅಫೀಮು ಜಪ್ತಿ ಮಾಡಲಾಗಿದೆ ; (ವಿವರ ನೀಡುವುದು)

(ಈ) ಜಿಲ್ಲೆಯ ವ್ಯಾಪ್ತಿಯಲ್ಲಿ ಅಕ್ರಮ ಚಟುವಟಿಕೆಗಳ ಬಗ್ಗೆ ತನಿಖೆ ನಡೆಸಿ, ಅಕ್ರಮ ಚಟುವಟಿಕೆಗೆ ಕಡಿವಾಣ ಹಾಕಲು ಯಾವಾಗ ವಿಶೇಷ ತಂಡ ರಚನೆ ಮಾಡಲಾಗುವುದು ? (ವಿವರ ನೀಡುವುದು)

## ರಾಜ್ಯದ ನ್ಯಾಯಾಲಯಗಳಲ್ಲಿರುವ
## ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೫೪ (೪೯೪) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನ್ಯಾಯಾಲಯಗಳಲ್ಲಿರುವ ಸಿವಿಲ್ ಪ್ರಕರಣಗಳನ್ನು ಯಾವ ರೀತಿಯಲ್ಲಿ ವಿಂಗಡಿಸಲಾಗಿದೆ ; ಕಳೆದ ೩ ವರ್ಷಗಳಲ್ಲಿ ಬಾಕಿ ಇರುವ ವಿವಿಧ ರೀತಿಯ ಸಿವಿಲ್ ಪ್ರಕರಣಗಳ ಸಂಖ್ಯೆ ಎಷ್ಟು ; ೩ ವರ್ಷಗಳಿಗಿಂತ ಅಧಿಕವಾಗಿ ಮುಂದುವರೆದಿರುವ ಪ್ರಕರಣಗಳ ಸಂಖ್ಯೆ ಒದಗಿಸುವುದು ; (ವಿವಿಧ ನ್ಯಾಯಾಲಯಗಳಲ್ಲಿರುವ ಬಾಕಿ ಪ್ರಕರಣಗಳ ವಿವರ ನೀಡುವುದು)

(ಆ) ಈ ಪ್ರಕರಣಗಳಲ್ಲಿ ಸರ್ಕಾರದ ವಿರುದ್ಧ ಮತ್ತು ಸರ್ಕಾರ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (೩ ವರ್ಷಗಳ ಮಾಹಿತಿ ನೀಡುವುದು)

(ಇ) ರಾಜ್ಯದ ನ್ಯಾಯಾಲಯಗಳಲ್ಲಿರುವ ಕ್ರಿಮಿನಲ್ ಪ್ರಕರಣಗಳು ಯಾವ ರೀತಿಯಲ್ಲಿ ವಿಂಗಡಿಸಲಾಗಿದೆ ; ಕಳೆದ ೩ ವರ್ಷಗಳಲ್ಲಿ ಯಾವ ಯಾವ ರೀತಿಯ ಕ್ರಿಮಿನಲ್ ಪ್ರಕರಣಗಳು ಬಾಕಿ ಇರುತ್ತವೆ ಮತ್ತು ಸಂಖ್ಯೆ ಎಷ್ಟು ; ೩ ವರ್ಷಗಳಿಗಿಂತ ಅಧಿಕವಾಗಿ ಮುಂದುವರೆದಿರುವ ವಿವಿಧ

ನ್ಯಾಯಾಲಯಗಳಲ್ಲಿರುವ ಬಾಕಿ ಪ್ರಕರಣಗಳ ಸಂಖ್ಯೆ ಒದಗಿಸುವುದು ; "Justice delayed is Justice denied" ಇದನ್ನು ಸರ್ಕಾರ ಯಾವ ರೀತಿ ವ್ಯಾಖ್ಯಾನಿಸುತ್ತಿದೆ ?

## ಜಿ.ಎಸ್.ಟಿ ರದ್ದಾಗಿರುವ ಕಂಪನಿಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೫೫ (೫೩.೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಕೋಟ್ಯಾಂತರ ರೂಪಾಯಿಗಳ ಸರಕು ಮತ್ತು ಸೇವಾ ತೆರಿಗೆಯ (ಜೆ.ಎಸ್.ಟಿ) ವಂಚನೆಗಿಳಿದಿರುವ ಕಂಪನಿಗಳ ವಿರುದ್ಧ ಕೇಂದ್ರ ಸರ್ಕಾರದ ಹಣಕಾಸು ಇಲಾಖೆ ಕಾರ್ಯಾಚರಣೆಯನ್ನು ನಡೆಸಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಬರೋಬ್ಬರಿ ೩.೭೨ ಲಕ್ಷ ಕಂಪನಿಗಳ ನೋಂದಣಿಗಳನ್ನು ಕೇಂದ್ರ ರದ್ದು ಮಾಡಿರುವುದು ರಾಜ್ಯ ಸರ್ಕಾರದ ಗಮನದಲ್ಲಿ ಇದೆಯೇ ;

(ಆ) ಜಿ.ಎಸ್.ಟಿ ವಂಚನೆಗಾಗಿಯೇ ನಕಲಿ ದಾಖಲಾತಿ ಸೃಷ್ಟಿಸಿ ಯಾವುದೇ ಸರಕುಗಳನ್ನು ಪೂರೈಸದೇ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐ.ಟಿ.ಸಿ) ಪಡೆಯಲು ಪ್ರಯತ್ನಿಸಿ ಸಿಕ್ಕಿಬಿದ್ದಿರುವ ಕಂಪನಿಗಳ ಸಂಖ್ಯೆ ಎಷ್ಟು ;

(ಇ) ಈ ತೆರಿಗೆ ವಂಚನೆ ಅಕ್ರಮವನ್ನು ತಡೆಗಟ್ಟಲು ಸರ್ಕಾರದಿಂದ ನೇಮಕಗೊಂಡ ಜಾರಿ ವಿಭಾಗದ ಅಧಿಕಾರಿಗಳು ಎಷ್ಟು ತೆರಿಗೆ ವಂಚನೆ ಪ್ರಕರಣಗಳನ್ನು ದಾಖಲು ಮಾಡಿದ್ದಾರೆ ; ಈ ಪ್ರಕರಣಗಳ ಪ್ರಸ್ತುತ ಹಂತವೇನು ; ಮತ್ತು ಯಾವ ಯಾವ ರಾಜ್ಯದ ಉದ್ಯಮಿಗಳು ಈ ವಂಚನೆಯಲ್ಲಿ ಹೆಚ್ಚಾಗಿ ಭಾಗಿಯಾಗಿದ್ದಾರೆ ;

(ಈ) ರಾಜ್ಯದ ಸರಕು ಮತ್ತು ಸೇವಾ ತೆರಿಗೆ ಕಛೇರಿಯಲ್ಲಿ ಬಹುತೇಕ ಸಿಬ್ಬಂದಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವುದು ನಿಜವೇ; ಈ ಕಛೇರಿಗಳಲ್ಲಿ ಖಾಯಂ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಇರುವ ಅಡಚಣೆಗಳೇನು ?

## ರಾಜ್ಯದಲ್ಲಿರುವ ಕೆರೆಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೫೬. (೪೫೭) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ದಾವಣಗೆರೆ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ; (ಕೆರೆಗಳ ಹೆಸರು, ಗ್ರಾಮ, ಹೋಬಳಿ, ತಾಲ್ಲೂಕಿನ ವಿವರ ಒದಗಿಸುವುದು)

(ಇ) ಕಳೆದ ೦೨ ವರ್ಷಗಳಲ್ಲಿ ಎಷ್ಟು ಕೆರೆಗಳ ಏರಿ ನಿರ್ಮಾಣ, ಹೂಳೆತ್ತುವ ಕಾಮಗಾರಿ ಮತ್ತು ಇನ್ನಿತರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಹಾಗೂ ಅವುಗಳಿಗೆ ಮಂಜೂರು ಮಾಡಿದ ಅನುದಾನವೆಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಈ) ಈ ಭಾರಿ ಅತಿ ಹೆಚ್ಚು ಮಳೆಯಾಗಿದ್ದು, ಕೆರೆಗಳು ತುಂಬಿ ಹರಿಯುತ್ತಿರುವುದರಿಂದ ಸದರಿ ಕೆರೆಗಳ ಏರಿಗಳ ಸಂರಕ್ಷಣೆಗಾಗಿ ಸರ್ಕಾರ ಯಾವ ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ ?

## ಬೆಂಗಳೂರು ನಗರದ ರಸ್ತೆ ದುರಸ್ತಿಗಳ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೭ (೫೧೫+೪೯೫) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರದಲ್ಲಿ ಪ್ರಸ್ತುತ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಬೆಂಗಳೂರು ನಗರದ ರಸ್ತೆ ಹಾಗೂ ಚರಂಡಿ ಮತ್ತು ಇನ್ನಿತರೆ ಸಮಸ್ಯೆಗಳು ಉಂಟಾಗಿದ್ದು, ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ೨೦೨೩–೨೪ನೇ ಸಾಲಿನಲ್ಲಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ; (ವಾರ್ಡ್‌ವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಬೆಂಗಳೂರು ಮಹಾನಗರ ಪಾಲಿಕೆಗೆ ಈ ಸಾಲಿನಲ್ಲಿ ನೀಡಿರುವ ಅನುದಾನದಲ್ಲಿ ರಸ್ತೆಗಳಿಗೆ ಡಾಂಬರೀಕರಣ ಹಾಗೂ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಪೂರ್ಣ ಪ್ರಮಾಣದಲ್ಲಿ ಆಗದೆ ಇರುವುದರಿಂದ ಈ ಕಾಮಗಾರಿಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಲು ಹೆಚ್ಚಿನ ಅನುದಾನವನ್ನು ನೀಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ?

## ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಬೆಂಗಳೂರು ಇದರ ಪ್ರವೇಶಾತಿಯ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೮ (೪೬೨) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾನೂನು ಶಾಲೆಯು ಪ್ರತಿ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಮಯದಲ್ಲಿ ರಾಜ್ಯ ಸರ್ಕಾರದ ಮೀಸಲಾತಿ ಹಾಗೂ ಶುಲ್ಕ, ನಿಯಮಾವಳಿಗಳನ್ನು ಪಾಲಿಸುತ್ತಿದೆಯೇ ; (ಸರ್ಕಾರದ ಮೀಸಲಾತಿಯ ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಬೆಂಗಳೂರು ಈ ಕಾನೂನು ಮಹಾವಿದ್ಯಾಲಯದಲ್ಲಿ ಪ್ರತಿವರ್ಷ ಎಷ್ಟು ವಿದ್ಯಾರ್ಥಿಗಳಿಗೆ ಎಲ್.ಎಲ್.ಬಿ., ಎಲ್.ಎಲ್.ಎಂ., ಹಾಗೂ ಇತರೆ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡಲಾಗುತ್ತಿದೆ ; ಈ ವಿದ್ಯಾಲಯದಲ್ಲಿ ಕರ್ನಾಟಕದ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲಾಗಿದೆ ; (ಕರ್ನಾಟಕದ ಹಾಗೂ ಇತರೆ ರಾಜ್ಯದ ವಿದ್ಯಾರ್ಥಿಗಳ ಕೋರ್ಸ್‌ವಾರು ಕಳೆದ ೦೫ ವರ್ಷದ ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಬೆಂಗಳೂರು ಇಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ ಯಾವ ರೀತಿಯ ಮೀಸಲಾತಿಯನ್ನು ನೀಡಲಾಗಿದೆ ; ಹಾರಿಜ಼ಾಂಟಲ್ ಮೀಸಲಾತಿಯನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆಯೇ ; ಯಾವ ರೀತಿಯಲ್ಲಿ ಈ ಮೀಸಲಾತಿ ಕಾರ್ಯನಿರ್ವಹಿಸುತ್ತದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಮಹಿಳೆಯರು ಮತ್ತು ಅಪ್ರಾಪ್ತರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೯ (೪೨೮) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧೆಡೆ ಮಹಿಳೆಯರು ಮತ್ತು ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಮತ್ತು ದೌರ್ಜನ್ಯ ಪ್ರಕರಣಗಳು ಆಗಿಂದಾಗ್ಗೆ ದಿನಪತ್ರಿಕೆಗಳಲ್ಲಿ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ದಾಖಲಾದ ಅತ್ಯಾಚಾರ ಪ್ರಕರಣಗಳೆಷ್ಟು ; ಲೈಂಗಿಕ ದೌರ್ಜನ್ಯ ಪ್ರಕರಣಗಳೆಷ್ಟು ; ಮತ್ತು ಪೋಕ್ಸೋ ಕಾಯ್ದೆಯಡಿ ದಾಖಲಾದ ಪ್ರಕರಣಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಮಹಿಳೆಯರು ಮತ್ತು ಅಪ್ರಾಪ್ತ ವಯಸ್ಸಿನ ಬಾಲಕಿಯರ ಸುರಕ್ಷತೆಗಾಗಿ ಮತ್ತು ಅತ್ಯಾಚಾರ ಪ್ರಕರಣಗಳು ನಡೆಯದಂತೆ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ನವೆಂಬರ್ ೧೭ ರಂದು ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ನಡೆದ ಪಿಡಿಓ ಪರೀಕ್ಷೆ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೬೦ (೮೮೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನವೆಂಬರ್ ೧೭ ರಂದು ಕಲ್ಯಾಣ ಕರ್ನಾಟಕ ಭಾಗದ ೯೭ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳ ನೇಮಕಾತಿಗಾಗಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜೊಂದರಲ್ಲಿ ನಡೆದ ಪರೀಕ್ಷೆಯ ವೇಳೆ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲು ಸುಮಾರು ಅರ್ಧ ಗಂಟೆ ತಡವಾಗಿದ್ದನ್ನು ಅಭ್ಯರ್ಥಿಗಳು ತಮಗಾದ ಅನ್ಯಾಯದ ವಿರುದ್ಧ ಪ್ರಶ್ನಿಸಿ ಪ್ರತಿಭಟಿಸಿದ್ದಕ್ಕಾಗಿ ಅಧಿಕಾರಿಗಳು ತಮ್ಮ ತಪ್ಪನ್ನು ಮರೆಮಾಚಲು ೧೨ ಜನ ಅಮಾಯಕ ಅಭ್ಯರ್ಥಿಗಳ ಮೇಲೆ ಪೊಲೀಸ್ ಪ್ರಕರಣವನ್ನು ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಘಟನೆಗೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಆ) ಈ ಘಟನೆಗೆ ಸಂಬಂಧಿಸಿದಂತೆ ಕೂಲಂಕಷವಾಗಿ ತನಿಖೆಯನ್ನು ನಡೆಸಲು ಸರ್ಕಾರವು ಆದೇಶಿಸಿದೆಯೇ; ಆದೇಶಿಸಿದ್ದಲ್ಲಿ, ತನಿಖಾ ವರದಿಯ ಕುರಿತು ಸಂಪೂರ್ಣ ವಿವರ ನೀಡುವುದು ;

(ಇ) ಈ ಪರೀಕ್ಷೆಯ ವೇಳೆ ಅಧಿಕಾರಿಗಳು ತಪ್ಪು ಮಾಡದಿದ್ದರೆ ಅಭ್ಯರ್ಥಿಗಳು ಪ್ರತಿಭಟಿಸುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ ; ಆದರೆ ಅಧಿಕಾರಿಗಳು ಮಾಡಿದ ತಪ್ಪಿಗೆ ಇಷ್ಟೆಲ್ಲಾ ಅವಾಂತರವಾಗಿರುವುದರಿಂದ ಇದು ಲೋಪವೆಸಗಿದ ಅಧಿಕಾರಿಗಳನ್ನು ರಕ್ಷಿಸುವ ಹುನ್ನಾರವಲ್ಲವೇ ; (ಈ ಕುರಿತು ಸ್ಪಷ್ಟನೆಯನ್ನು ನೀಡುವುದು)

(ಈ) ಅಲ್ಲದೆ ಈ ಘಟನೆಯ ವೇಳೆ ಕರ್ತವ್ಯ ನಿರ್ವಹಿಸುತ್ತಿದ್ದ ತಹಶೀಲ್ದಾರ್‌ವೊಬ್ಬರು ಅಮಾಯಕ ಆರೋಪಿ ಅಭ್ಯರ್ಥಿಯೊಬ್ಬರಿಗೆ ಈ ಬಗ್ಗೆ ಎಲ್ಲಿಯೂ ಬಾಯಿ ಬಿಡದಂತೆ ಬೆದರಿಕೆಯೊಡ್ಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಅಧಿಕಾರಿಯ ಮೇಲೆ ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು ;

(ಉ) ಈ ಅಭ್ಯರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಪ್ರಕರಣವನ್ನು ಹಿಂತೆಗೆದುಕೊಂಡು ಅವರಿಗೆ ನ್ಯಾಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬಹುದಲ್ಲವೇ ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ–592, 600 ಪ್ರತಿಗಳು (ಹಿ6)

**List of Questions for Oral Answers**

**Total No. of Questions - 15**

**LIST - 04**

# KARNATAKA LEGISLATIVE COUNCIL

## ONE HUNDRED AND FIFTY FOURTH SESSION

## Thursday, the 12th December, 2024

---

**GROUP - IV**

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology.

---

### LOANS BORROWED FROM THE RESERVE BANK OF INDIA AND OTHER SOURCES

Sri K.A. Thippeswamy (Nominated) -

46 (464) Will the Chief Minister be pleased to state:-

a) the amount of the loan that has been borrowed by the State Government from the Reserve Bank of India and other sources during the financial years of 2019-20, 2020-2021, 2021-22, 2022-23 and 2023-24; and the percentage of GDP for the loan that has been borrowed in this manner; and whether it is being subjected to the limit of loan which has been fixed by the Central Government; (information be furnished)

b) the kinds of securities that are being provided by the Government to borrow the loan in this manner; and whether the guarantee, permission and consent has been obtained by the Central Government from time to time in this regard; (complete information be furnished)

c) the particulars of items for which the borrowed loan has been utilised by the State Government during the above years and out of this loan, the amount that has been spent for the development and non-development sectors; (yearwise, sectorwise including itemwise complete information be furnished)

d) if the burden of loan is more than 3% of GDP of the State, the particulars of measures of the Government to bear the additional tax to the exchequer of the Government; (in this regard complete information be furnished)

e) whether the proposal has been submitted by the State Government to the Central Government to enhance the limit of loan due to most of the budget share is being allotted to 5 guarantees which are being implemented by the State Government; or whether the effort of the Government to mobilize the loan from non- budgetary sources? (complete information be furnished)

## LIFT IRRIGATION PROJECT

**Sri Nirani Hanamant Rudrappa (Graduates' Constituency) -**

47(449) Will the Minister for Minor Irrigation, Science and Technology. be pleased to state:-

a) the particulars of lift irrigation( drip irrigation only) projects that have been taken up in Vijayapura and Bagalkote district; (complete information be furnished)

b) the details of authority which will be carrying out the work of creating awareness amongst the farmers with regard to making better utilization by adopting drip irrigation in this project; (information be furnished)

c) if the problems arises in the equipments that have been provided and the pipes that have been installed in the land to adopt the drip irrigation for farmers, the details of authority which will execute the same; after completion of this lift irrigation project the authority which will monitor the same; (complete information be furnished)

d) the various kinds of awareness that have been created amongst the farmers with regard to continuation of drip irrigation system;

e) whether it has come to the notice of the Government that the Substandard work has been executed in some of the lift irrigation works, after completion of the work the substandard pipes have been provided to the farmers and these have been damaged quickly and the cases of the pipes that have been deracinated by the farmers from the land; if so, the action that has been taken in this regard; (complete information be furnished)

f) whether the Government has contemplated to get the report by constituting a committee in the Government level to conduct an inspection of completed lift irrigation works? (information be furnished)

**REGARDING NEW SCAM OF "DIGITAL ARREST"**

**Sri Prathap Simha Nayak K. (Elected by Legislative Assembly -**

48(403) Will the Minister for Home be pleased to state:-

a) whether it has come to the notice of the Government that the cyber fraudsters are deceiving several people through new type of fraud called "Digital Arrest" using a new weapon every day in the State;

b) if so, the number of cases that have been registered during the current year in this regard;

c) out of the said registered cases, the amount that has been lost by the public from the fraudsters; (details be furnished)

d) whether the defrauded amount has been seized from the scamsters by detecting the origin of the said cases;

e) the "Digital Arrest" scam cases are increasing day by day, the measures taken by the Government to prevent several innocent people who have fallen into the network of this scam?

## PROVIDING COMPENSATION FOR CANCELLED PROPOSAL OF LAND OWNERS

**Sri P.H.Pujar (Local Authorities Constituency) -**

49(436) Will the Deputy Chief Minister be pleased to state:-

a) the Government has been decided to acquire 75.563 acres of land in 2 phases which will be submerged from F.R.L 519.6 to 524.256 meters regarding U.K.P phase 3, whether it is true that the decision has been taken by the Government to initially acquire only 38.983 acres of land that will be submerged from R.L.519.6 to 522 and remaining 36.580 acres of land has bringing under land acquisition in the further phase;

b) in view of this, whether the notifications have been provided to several land owners as per the further notification 19(1) which is followed by section 11(1)of Land Acquisition Act;

c) whether the Government is aware about the fact that after publication of land acquisition under section 11(1), there is a condition as a part of the notice that the land owners shall not undertake any improvement and developmental activity on the land which has been acquired ;

d) since the cases enforced under section 11(1), 19(1) of land acquisition procedure have been stopped in the middle and many proposals have been cancelled, whether it has come to the notice of the Government

that unbearable loss is being caused for the farmers who were anticipating more income by developing the land there of; if so, whether the compensation would be provided for the owners of the lands where the land acquisition process has been cancelled?

**CONTAMINATION OF CAUVERY RIVER**

**Sri Kushalappa M.P. (suja) (Local Authorities Constituency)**

50(476) Will the Deputy Chief Minister be pleased to state:-

a) the river cauvery originates in kodagu district, the report has been submitted previously that the said river is being contaminated, whether the study committee has been constituted by the Government for the protection of cauvery river;

b) if so, the particulars of the members in the study committee; the number of times the said committee has visited and the study has been conducted ; the chairmanship under which the committee has been constituted;

c) whether the report has been submitted by the committee to the Government; if so, the copy of report be furnished; the precautionary measures to be taken by the Government for the protection of cauvery river as per this report? (complete details be furnished)

**SAFETY OF DAMS IN THE STATE**

**Sri Madhu G.Madegowda (Graduates' Constituency) -**

51(551) Will the Deputy Chief Minister be pleased to state:-

a) the particulars of major and medium dams and reservoirs in the State; the year in which these are constructed; the water storage capacity of the same; the lifespan of these dams/reservoirs; (dam and reservoirswise information be furnished)

b) whether the "Dam Safety Committee" has been constituted in the State; the details of persons in the committee; the purpose and scope of the committee; (in this regard information be furnished)

c) the number of dams of the State for which this committee has visited so far and whether the report has been submitted regarding the safety; whether any measures have been taken based on the report; (complete details be furnished)

d) the number of times in which the meetings should be conducted annually by the committee as per the Dam Safety Act, 2021; the number of meetings that have been conducted so far;

e) whether it is true that the report has to be made available for the public by the committee; if so, the number of reports that have reached to public so far? (complete information be furnished)

**REGARDING REVISION OF THE GUARANTEE SCHEMES**

**Sri C.T.Ravi (Elected by Legislative Assembly) -**

52(407) Will the Chief Minister be pleased to state:-

a) the tax that has been collected from all sources in the State; the target that has been fixed for the end of the year 2023-24 and 2024-25 and the tax that has been collected;

b) the amount required every month for the guarantee schemes; the amount that has been spent for the said schemes (upto the end of November 2024) since the guarantee schemes have came into existence; (guarantee schemewise comprehensive information be furnished)

c) whether the guarantee implementation committees have been constituted; (districtwise details be furnished) the particulars of salary/honorarium and other facilities that are being provided for the chairman/members of the guarantee implementation committee; (order copy be furnished)

d) whether the Government has decided to revise the guarantee schemes; the reasons for the revision; the details of the discussions held in the cabinet meeting in this regard; the criteria to be followed for the revision of the guarantee;

e) the principal and interest amount that is being paid every month for the loans obtained by the Government from the various sources; the amount of external and internal loan that has been borrowed by the State Government from the various institutions during the last 2 years; (comprehensive details be furnished)

f) whether it is true that there is a shortage of grants for the development of the constituencies due to the implementation of the guarantee; the grant that has been provided for the development of constituencies (upto the end of November 2024)? (constituencywise and departmentwise details be furnished)

## CONSTITUTION OF SPECIAL TEAM TO CONTROL ILLEGAL ACTIVITIES

**Sri Bhimrao Basavaraj Patil (Local Authorities Constituency)-**

53 (458) Will the Minister for Home be pleased to state:-

a) whether it has come to the notice of the Government that the illegal sale of ganja, matka mafia, gambling, fake gutka and illegal activities are occurring without fear in the limits of Bidar district; if so, the action taken by the Government;

b) the action taken against the persons who have been involved in the illegal activities; the number of cases that have been filed so far; (information be furnished)

c) the value of gutka and illegal opium that has been seized in bidar district so far; (details be furnished)

d) the date on which the special team would be constituted to control the illegal activities by conducting investigation with regard to illegal activities in the limits of the district? (details be furnished)

## CIVIL AND CRIMINAL CASES IN THE COURTS OF THE STATE

**Smt.Bharathi Shetty (Nominated) -**

54 (494) Will the Minister for Law, Parliamentary Affairs and Legislation and Tourism . be pleased to state:-

a) the manner in which civil cases in the court of the State have been bifurcated; the number of various types of civil cases which have been pending during the last 3 years; the number of cases which have been continuing for more than 3 years be furnished; (the details of pending cases in various courts be furnished)

b) out of these cases, the number of cases that have been lodged against the Government and lodged by the Government if self; (3 years information be furnished)

c) the manner in which the criminal cases in the courts of the State have been bifurcated; the number of various types of criminal cases which have been pending during the last 3 years and the number of the same; the number of pending cases in various courts which have been continuing for more than 3 years be furnished; the manner in which the phrase "justice delayed is justice denied" is being defined by the Government?

## CANCELLATION OF GST OF THE COMPANIES

**Sri Nagaraju M. (Elected by Legislative Assembly) -**

55 (535) Will the Chief Minister . be pleased to state:-

a) whether it has come to the notice of the Government that the registration of almost 3.72 lakhs companies has been cancelled by the Central Government in Karnataka during the last 3 years by conducting operation by the finance department of the Central Government against the companies which have involved in the evasion of crores of rupees of goods and service tax (G.S.T) by creating fake invoice;

b) the number of companies which have been caught by trying to get input tax credit (I.T.C) by creating fake invoices without providing any goods by creating fake document for G.S.T evasion;

c) the number of tax evasion cases have been lodged by the officers of enforcement division who have been appointed by the Government to prevent this irregularities of tax evasion; the present stage of these cases; and the particulars of the State of the entrepreneur who are extensively involved in this evasion;

d) whether it is true that more number of staff are working on outsource basis in the office of the goods and service tax of the State; the prevailing impediments to recruit the permanent staff in this offices?

**LAKES IN THE STATE**

**Sri K. Abdul Jabbar (Elected by Legislative Assembly) -**

56 (457) Will the Minister for Minor Irrigation, Science and Technology. be pleased to state:-

a) the number of lakes which are coming under the limits of minor irrigation department; (districtwise information be furnished)

b) the number of lakes which are coming under the limits of minor irrigation department in Davangere district; (the details of name of lakes, village, Hobli, taluk be furnished)

c) the number of lakes for which the construction of embankment, desilting and other works have been taken up during the last two years; and the grant that has been sanctioned to them; (districtwise information be furnished)

d) the particulars of precautionary measures taken by the Government for the protection of embankments of the said lakes as the lakes are over flowing from the excessive rainfall in this season?

**REPAIRING OF ROAD IN BENGALURU CITY**

**Sri S.L. Bhojegowda (Teachers' Constituency) -**

**Sri H.S. Gopinath (Local Authorities Constituency) -**

57 (515+495) Will the Deputy Chief Minister be pleased to state:-

a) the damages of the roads, drainage and other problems of Bengaluru city that have been caused due to the heavy rainfall during the current year in Bengaluru metropolitan city, the grant that has been released for the said developmental works during the year 2023-24; (wardwise complete information be furnished)

b) since the works of asphaltisation and filling up the potholes have not executed completely out of the grant that has been provided during this year to the Bruhat Bengaluru Mahanagara Palike, the particulars of measures taken by the Government to provide more grant for the completion of these works rapidly?

**ADMISSION PROCESS IN THE NATIONAL LAW SCHOOL OF INDIA UNIVERSITY, BENGALURU**

**Sri M.L. Anil Kumar (Local Authorities Constituency) -**

58 (462) Will the Minister for Law, Parliamentary Affairs and Legislation and Tourism . be pleased to state:-

a) whether the rules and regulations of reservation and fee of the State Government are being followed by the law school during the admission of students in each academic year; (complete information of reservation of the Government be furnished)

b) the number of students to whom the admission is being offered to L.L.B, L.L.M and other courses every year in the National School of India University, Bengaluru; the number of students of Karnataka to whom the admission has been provided in this university; (coursewise complete information of the students of Karnataka and other state during the last 5 years be furnished)

c) the manner in which the reservation is being provided in the admission of students of Karnataka in the National Law School of India University, Bengaluru; whether the horizontal reservation is being provided to the students of Karnataka; the manner in which this reservation is being executed? (complete information be furnished)

## REGARDING RAPE ON WOMEN AND MINOR GIRLS

**Sri S. Ravi (Local Authorities Constituency) -**

59 (428) Will the Minister for Home. be pleased to state:-

a) whether it has come to the notice of the Government that the rape and violence cases which are being occurring on women and minor girls in various places of the State are being reported in daily newspapers frequently;

b) if so, the number of rape cases that have been lodged in the State during the last three years; the number of sexual assault cases; and the number of cases that have been lodged under POCSO Act; (districtwise details be furnished)

c) the steps taken by the Government for the safety of women and minor girls and to prevent the rape cases? (details be furnished)

## REGARDING PDO EXAMINATION

**Sri Shashil G.Namoshi (Teachers' Constituency) -**

60 (884) Will the Chief Minister. be pleased to state:-

a) approximately half an hour delay has been occurred for providing question papers during the time of examination held at the Government Pre-University College of Sindhanur taluk of Raichur district for the recruitment of 97 posts of Panchayat development officer of Kalyana Karnataka region on November 17, hence the candidates have questioned and protested against the injustice that has been caused for them, whether it has come to the notice of the Government that the police case has been lodged against 12 innocent candidates by the officers to hide their mistake; if so, the reasons for not taking any action against the officers who were the reasoned for this incident;

b) whether the Government has ordered to conduct thorough investigation with regard to this incident; if so, the complete details regarding the investigation report be furnished;

c) if the officers have not commited any mistake at the time of examination would not have arosed the question of protesting by the candidates and also since all these havoc is due to the mistake made by the officers, whether it has planned to protect the officers who have committed mistake; (clarification in this regard be furnished)

d) whether it has come to the notice of the Government that the tahasildar who was on duty at the time of incident has threatened the innocent accused candidate as do not spread about this anywhere in this regard; if so, the action that would be taken by the Government against the said officer;

e) whether the steps would be taken by the Government to provide the justice for the candidates by withdrawing the cases in view of future for the candidates? (details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD- 592 - Copies